ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/50/2012-13/670 ದಿನಾಂಕ : 27.03.2014

**ಅಧಿಕೃತ ಜ್ಞಾಪನಾ**

ವಿಷಯ: ಜಿಲ್ಲೆಗಳಿಗೆ ಬಿಡುಗಡೆಯಾಗಿ ಖರ್ಚಾಗದೆ ಉಳಿದಿರುವ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನವನವನ್ನು ಮರು ಹಂಚಿಕೆ ಮಾಡಲು ಹೊರಡಿಸಲಾದ ಸರ್ಕಾರದ ಆದೇಶ ಗ್ರಾಅಪ ರಾನೀನೈ/ನಿಭಾಅ/50/2012-13 ದಿನಾಂಕ: 28.01.2014/537 ನ್ನು ಹಿಂಪಡೆಯುವ ಬಗ್ಗೆ

ಉಲ್ಲೇಖ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ W.11013/2/2008 CRSP dtd.24.3.2009
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ W.11044/15/2009-CRSP dtd.8.7.2009
3. ಈ ಕಚೇರಿಯ ಕೇಂದ್ರದ ಪಾಲಿನ ಬಿಡುಗಡೆ ಆದೇಶ ಸಂಖ್ಯೆ ಗ್ರಾಅಪ/ಸಂ.ಸ್ವ.ಆಂ/120/09/11-12/2013-14 ದಿ.13.9.2013.
4. ಕೇಂದ್ರ ಸರ್ಕಾರದ ಅ.ಸ.ಪತ್ರ ಸಂಖ್ಯೆ-11023/01/2013-NBA dtd.26.08.2013
5. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ ರಾನೀನೈ ನಿಭಾಅ/50/2012-13 ದಿನಾಂಕ 28.01.2014/537
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ,ಮತ್ತು ಹಾವೇರಿ ಇವರುಗಳ ಪತ್ರ ಕ್ರಮವಾಗಿ ದಿನಾಂಕ 21.2.2014 ಮತ್ತು 10.3.2014.

---

ಉಲ್ಲೇಖಿತ (5) ರ ಸರ್ಕಾರದ ಅದೇಶದನ್ವಯ ಬಳ್ಳಾರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಖರ್ಚಾಗದೇ ಹೆಚ್ಚುವರಿಯಾಗಿ ಲಭ್ಯವಿರುವ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನ ಕ್ರಮವಾಗಿ ರೂ 40.00 ಲಕ್ಷಗಳು ಮತ್ತು ರೂ 75 ಲಕ್ಷಗಳು, ಒಟ್ಟಾರೆ ರೂ 115.00 ಲಕ್ಷಗಳನ್ನು ಅವಶ್ಯವಿರುವ ತುಮಕೂರು ಜಿಲ್ಲೆಗೆ ಮರುಹಂಚಿಕೆ ಮಾಡಿ ಬಿಡುಗಡೆ ಮಾಡಲು ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಪತ್ರ ಸಂಖ್ಯೆ ಜಿಪಂ/ಅಭಿ/2/ಜಿನೆಘ/10/2013-14/7258 ದಿ.21.2.2014 ರನ್ವಯ ಜಿಲ್ಲೆಗೆ ಬಿಡುಗಡೆಯಾದ 40.50 ಲಕ್ಷ ಅನುದಾನವನ್ನು ಸಂಪೂರ್ಣವಾಗಿ ವೆಚ್ಚಮಾಡಲಾಗಿದೆಯೆಂದು ಪ್ರಸ್ತುತ ಗ್ರಾ.ಪಂ.ಗಳಲ್ಲಿ ರೂ.429.81 ಲಕ್ಷಗಳು ಹಾಗೂ ಜಿಲ್ಲಾ ಪಂಚಾಯತ್‌ನಲ್ಲಿ ರೂ 16.56 ಲಕ್ಷಗಳು ಮಾತ್ರ ಲಭ್ಯವಿದ್ದು ಎಂ.ಜಿ.ಎನ್.ಆರ್.ಇ.ಜಿ.ಎ ಸಹಯೋಗದೊಂದಿಗೆ ಶೌಚಾಲಯಗಳನ್ನು ನಿರ್ಮಿಸುತ್ತಿದ್ದು 9719 ಶೌಚಾಲಯಗಳು ಪ್ರಗತಿ ಹಂತದಲ್ಲಿದ್ದು ರೂ.456.79 ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆ. RFD ಗುರಿಯಂತೆ ಅನುದಾನ ಬಿಡುಗಡೆ ಮಾಡುತ್ತಿರುವುದರಿಂದ ಯಾವುದೇ ಹೆಚ್ಚುವರಿ ಅನುದಾನ ಲಭ್ಯವಿರುವುದಿಲ್ಲ ಹಾಗೂ ರೂ.40.00 ಲಕ್ಷಗಳನ್ನು ತುಮಕೂರು ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ಅಂತೆಯೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರು ಪತ್ರ ಸಂಖ್ಯೆ ಹಾಜಿಪಂ/ಅಭಿ-3/ಎನ್.ಬಿ.ಎ/ವಹಿ/2013-14 ದಿ.10.3.2014 ರನ್ವಯ ಗ್ರಾಮ ಪಂಚಾಯತ್‌ಗಳಲ್ಲಿ ವೈಯಕ್ತಿಕ ಶೌಚಾಲಯಗಳ ಪ್ರಗತಿ ತೀವ್ರಗತಿಯಲ್ಲಿದ್ದು, ಅನುದಾನವನ್ನು ಪ್ರಗತಿಯಾದ ಗ್ರಾ.ಪಂ.ಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ರೂ.75.00 ಲಕ್ಷಗಳನ್ನು ತುಮಕೂರು ಜಿಲ್ಲಾ ಪಂಚಾಯತ್ ವರ್ಗಾಯಿಸಲು ಸರ್ಕಾರದ ಆದೇಶ ಹೊರಡಿಸಲಾಗಿದ್ದು, ದಿನಾಂಕ: 14.2.2014 ರ ಂದು ಜರುಗಿದ ವಿಡಿಯೋ ಸಂವಾದದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿದಂತೆ ಜಿಲ್ಲೆಯಲ್ಲಿಯೇ ವಿನಿಯೋಗಿಸಿಕೊಳ್ಳಲು ಸೂಚಿಸಿರುತ್ತಾರೆ. ಆದ್ದರಿಂದ ಹಾವೇರಿ ಜಿಲ್ಲೆಯ ರೂ.75.00 ಲಕ್ಷಗಳನ್ನು ತುಮಕೂರು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಲು ಸಾಧ್ಯವಿಲ್ಲವೆಂದು ಗಮನಿಸಲಾಗಿರುತ್ತದೆ.

ಪು.ತಿ.ನೋ

ಆದ್ದರಿಂದ ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹೊರಡಿಸಲಾದ ಉಲ್ಲೇಖಿತ (5) ರ ಸರ್ಕಾರದ ಆದೇಶವನ್ನು ಹಿಂಪಡೆಯಲಾಗಿದೆ.

ಮಿಷನ್ ನಿರ್ದೇಶಕರ ಪರವಾಗಿ
ರಾ.ನೀ.ನೈ.ಸಂಸ್ಥೆ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್
ಇಲಾಖೆ

ಪ್ರತಿಯನ್ನು ಮಾಹಿತಿಗಾಗಿ :

1. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.& ಪಂ.ರಾಜ್ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಮಿಷನ್ ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ , ಬಳ್ಳಾರಿ ಹಾಗೂ ಹಾವೇರಿ ಜಿಲ್ಲೆ.
5. ಕಚೇರಿ ಪ್ರತಿ